**ಸಾಕ್ಷಿಯನ್ನು ದಿನಾಂಕಃ 05.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಎನ್.ಎಸ್, ವಕೀಲರಿಂದಃ**

ನಾನು ನಂಜನಗೂಡಿನ ರಾಮಸ್ವಾಮಿ ಬಡಾವಣೆ ಮತ್ತು ಬೊಕ್ಕಹಳ್ಳಿಯಲ್ಲಿರುವ ಎರಡೂ ಮನೆಯಲ್ಲಿ ವಾಸವಿರುತ್ತೇನೆ. ನಾನು ರಾಮಸ್ವಾಮಿ ಬಡಾವಣೆಯಲ್ಲಿರುವ ಮನೆಯಲ್ಲಿ 8-9 ವರ್ಷಗಳಿಂದ ವಾಸವಿರುತ್ತೇನೆ. ರಾಮಸ್ವಾಮಿ ಬಡಾವಣೆಯಲ್ಲಿ ವಾಸವಿರುವ ಬಗ್ಗೆ ದೂರಿನಲ್ಲಿ ಹೇಳಿರುವುದಿಲ್ಲ. ನಾನು ನಿವೃತ್ತಿ ಹೊಂದುವ ಪೂರ್ವದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೆ ಎಂ ದೊಡ್ಡಿಯಲ್ಲಿರುವ ಬಿ ಸಿ ಎಂ ಹಾಸ್ಟೆಲ್ ನ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದೆ, ನಾನು 2012 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದುವ ಪೂರ್ವದಲ್ಲಿ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ವಾಸವಿದ್ದೆನು. ಆರೋಪಿ ನಮ್ಮ ಗ್ರಾಮದವರಾಗಿದ್ದು, ನನಗೆ ದೂರದ ಸಂಬಂಧಿಯಾಗಬೇಕು. ಆರೋಪಿಯ ವಾಸದ ಮನೆಯ ವಿಳಾಸವನ್ನು ನಮೂದಿಸಿರುವುದಿಲ್ಲ. ಆರೋಪಿ ನನ್ನ ದೂರದ ಸಂಬಂಧಿಯಾಗಿದ್ದು, ಅವರು ನಮ್ಮ ಊರಿನವರೇ ಆಗಿರುತ್ತಾರೆಂದು ದೂರಿನಲ್ಲಿ ಬರೆಸಲು ಯಾವುದೇ ತೊಂದರೆ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದ ವ್ಯವಹಾರವನ್ನು ಹೊರತುಪಡಿಸಿ, ಆರೋಪಿಗೆ ಈ ಮೊದಲು ನಾನು ಯಾವುದೇ ಹಣ ನೀಡಿಲ್ಲ. ಆರೋಪಿ ತನಗೆ ಹಣ ಬೇಕೆಂದು ಕೇಳಿದ್ದಕ್ಕೆ ಡಿಸೆಂಬರ್ 2021ರಲ್ಲಿ ರೂ.1,50,000/- ಹಣ ಕೊಟ್ಟಿರುತ್ತೇನೆ. ಸದರಿ ಹಣ ಕೊಟ್ಟ 1 ತಿಂಗಳ ಅವಧಿಯಲ್ಲಿ ಜನವರಿ 2022 ರಂದು ಆರೋಪಿ ಮತ್ತು ಅವರ ಹೆಂಡತಿ ನಂಜನಗೂಡಿನಲ್ಲಿರುವ ನಮ್ಮ ಮನೆಗೆ ಬಂದು ಖಾಸಗಿ ಶಾಲೆಯವರು ಆರೋಪಿಯ ಹೆಂಡತಿಯನ್ನು ಖಾಯಂ ನೌಕರಳನ್ನಾಗಿ ಪರಿಗಣಿಸಬೇಕಾದರೆ ಹಣ ಕೊಡಬೇಕೆಂದು ಕೇಳಿರುತ್ತಾರೆ. ಆದ್ದರಿಂದ ಜನವರಿ 2022 ರಂದು ರೂ.

5,00,000/- ಮತ್ತು ಮೇ 2022 ರಂದು ರೂ.2,50,000/- ಹಣವನ್ನು ನನ್ನ ಬಳಿ ಪಡೆದಿರುತ್ತಾರೆ. ನಾನು ಆರೋಪಿಗೆ 3 ಕಂತುಗಳಲ್ಲಿ ಹಣ ನೀಡಿದ್ದು, ಯಾವ ದಿನಾಂಕದಂದು ನೀಡಿರುತ್ತೇನೆಂದು ನನಗೆ ದಿನಾಂಕವನ್ನು ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ಯಾವುದೇ ಸರ್ಕಾರಿ ನೌಕರ ಬೇರೆಯವರಿಗೆ ಹಣ ನೀಡಿದರೆ ರಶೀದಿ ಪಡೆಯುತ್ತಾರೆ ಎಂದರೆ ಸರಿ, ಆದರೆ ಆರೋಪಿ 1 ತಿಂಗಳಿನಲ್ಲಿಯೇ ಹಣ ಕೊಡುತ್ತೇನೆಂದು ಹೇಳಿದ್ದರಿಂದ ನಾನು ಯಾವುದೇ ರಶೀದಿ ಪಡೆದಿಲ್ಲ. ನಾನು ಆರೋಪಿಗೆ ಹಣ ನೀಡಿದಾಗ ಅವರಿಂದ ರಶೀದಿ ಪಡೆಯಬೇಕೆಂಬ ತಿಳುವಳಿಕೆ ಇತ್ತು, ಆದರೆ ಅವರ ಮೇಲೆ ನಂಬಿಕೆ ಇದ್ದುದರಿಂದ ಅವರಿಂದ ರಶೀದಿ ಪಡೆದಿರುವುದಿಲ್ಲ. ನಾನು ಸರ್ಕಾರಿ ನೌಕರನಾಗಿದ್ದರಿಂದ ಸಾಮಾನ್ಯವಾಗಿ ರೂ.20,000/-ಕ್ಕಿಂತ ಹೆಚ್ಚು ನಗದನ್ನು ನೀಡುವಂತಹ ಸಂದರ್ಭ ಉಂಟಾದಾಗ ಡಿಡಿ ಅಥವಾ ಚೆಕ್ ಮುಖಾಂತರವೇ ಕೊಡಬೇಕಾಗುತ್ತದೆ ಎಂಬ ತಿಳುವಳಿಕೆ ಇರುತ್ತದೆ. ನಾನು ಆರೋಪಿಗೆ ಯಾವ ಉದ್ದೇಶಕ್ಕಾಗಿ ಹಣ ಕೊಟ್ಟಿರುತ್ತೇನೆ ಎಂದು ಪ್ರಮಾಣಪತ್ರದಲ್ಲಾಗಲಿ ಅಥವಾ ದೂರಿನಲ್ಲಾಗಲಿ ಹೇಳಿಲ್ಲ. ಆರೋಪಿ ಮತ್ತು ಆತನ ಹೆಂಡತಿ ನಂಜನಗೂಡಿನಲ್ಲಿರುವ ನನ್ನ ಮನೆಗೆ ಬಂದು ಹಣ ಪಡೆದಿರುತ್ತಾರೆಂದು ದೂರಿನಲ್ಲಾಗಲಿ ಅಥವಾ ಪ್ರಮಾಣಪತ್ರದಲ್ಲಾಗಲಿ ಹೇಳಿಲ್ಲ. ನಾನು 3 ನೇ ಕಂತಿನ ಹಣವನ್ನು ಕೊಟ್ಟಾಗ 2-3 ತಿಂಗಳೊಳಗೆ ಕೊಡುತ್ತೇನೆಂದು ಆರೋಪಿ ಭರವಸೆ ಕೊಟ್ಟಿರುತ್ತಾರೆ. ಈ ಮೇಲೆ ಹೇಳಿದಂತೆ 3 ಸಂದರ್ಭಗಳಲ್ಲಿಯೂ ಹಣ ನೀಡಿದಾಗ ಆರೋಪಿಯಿಂದ ನಾನು ಆರೋಪಿಯಿಂದ ಯಾವುದೇ ದಾಖಲೆಯನ್ನು ಬರೆಸಿಕೊಂಡಿಲ್ಲ ಮತ್ತು ಆರೋಪಿಯೂ ಕೂಡ ಯಾವುದೇ ದಾಖಲೆಯನ್ನು ನೀಡಿಲ್ಲ. ಆರೋಪಿ 2 ತಿಂಗಳಾದರೂ ಹಣ ನೀಡದೆ ಇದ್ದುದರಿಂದ ಜುಲೈ 2022 ರ ಮೊದಲನೇ ವಾರ ಬೆಳಿಗ್ಗೆ 10.00 ಗಂಟೆಯ ನಂತರ ನಂಜನಗೂಡಿನಲ್ಲಿರುವ ಆರೋಪಿಯ ಮನೆಗೆ ಹೋಗಿ

**ಪಿ.ಡಬ್ಲ್ಯು-01**

ಹಣ ಕೇಳಿರುತ್ತೇನೆ. ಆರೋಪಿಯ ಮನೆಯೂ ಕೂಡ ನಂಜನಗೂಡಿನ ರಾಮಸ್ವಾಮಿ ಬಡಾವಣೆಯಲ್ಲಿರುತ್ತದೆ. ನಾನು ಆರೋಪಿಯ ಮನೆಗೆ ಹೋದಾಗ ಆರೋಪಿ ಮತ್ತು ಅವರ ಮಕ್ಕಳು ಇದ್ದರು ಮತ್ತು ಹಣವನ್ನು ಕೊಡುತ್ತೇನೆ ಎಂದು ಹೇಳಿ ಕಳುಹಿಸಿರುತ್ತಾರೆ. ನಾನು ಪುನಃ ಮೊದಲನೆ ವಾರದಲ್ಲಿ 2 ನೇ ಬಾರಿಗೆ ಅವರ ಮನೆಗೆ ಹೋಗಿ ಹಣ ಕೇಳಿರುತ್ತೇನೆ. ನಾನು ಪುನಃ 6 ನೇ ತಾರೀಖಿನಂದು ಹಣ ಕೇಳಲು ಹೋದಾಗ ಆರೋಪಿ ಚೆಕ್ ಕೊಟ್ಟಿರುತ್ತಾರೆ. ಆರೋಪಿ ಚೆಕ್ ಕೊಟ್ಟಾಗ ಬೆಳಿಗ್ಗೆ 10.00 ಗಂಟೆಯಾಗಿತ್ತು. ಚೆಕ್ ನಲ್ಲಿರುವ ಬರವಣಿಗೆಯನ್ನು ಆರೋಪಿಯೇ ಬರೆದಿರುತ್ತಾರೆ. ಚೆಕ್ ಕೊಡುವ ಸಂದರ್ಭದಲ್ಲಿ ಆರೋಪಿಯ ಮನೆಯಲ್ಲಿ ಬೇರೆ ಯಾರು ಇದ್ದರು ಎಂದು ನಾನು ನೋಡಿರುವುದಿಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**ಮರು ವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**